ತ್ಯಾಜ್ಯ ವಿಲೇವಾರಿ

1183(2030); ಡಾ॥ ಶಿವರಾಜ್ ಪಾಟೀಲ್ ಎಸ್. (ರಾಯಚೂರ ನಗರ)

ಅ) ಸ್ಥಳೀಯ ಸಂಸ್ಥೆಗಳಾದ ಮಹಾನಗರಪಾಲಿಕೆಗಳು, ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ತ್ಯಾಜ್ಯ ವಿಲೇವಾರಿ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ತ್ಯಾಜ್ಯ ವಿಲೇವಾರಿ ಮಾಡುವ ಪ್ರಕ್ರಿಯೆಗಾಗಿ ನಿಗದಿಪಡಿಸಿರುವ ಅನುದಾನ ಎಷ್ಟು; ಹಾಗೆಯೇ ಪ್ರತಿ ನಿತ್ಯ ಉತ್ಪತ್ತಿಯಾಗುತ್ತಿರುವ ತ್ಯಾಜ್ಯ ಎಷ್ಟು; ತ್ಯಾಜ್ಯ ವಿಲೇವಾರಿ ಮಾಡಲು ಯಾವ ಯಾವ ಕ್ರಮಗಳನ್ನು ಅನುಸರಿಸಲಾಗುತ್ತಿದೆ. (ಸ್ಥಳೀಯ ಸಂಸ್ಥೆವಾರು ಸಂಪೂರ್ಣ ವಿವರ ನೀಡುವುದು);

ಇ) ತ್ಯಾಜ್ಯ ವಿಲೇವಾರಿ ಮಾಡಿ ಸಾರ್ವಜನಿಕರಿಗೆ ಉತ್ತಮ ವಾತಾವರಣ ಕಲ್ಪಿಸಿಕೊಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು);

ಶ್ರೀ ವಿನಯಕುಮಾರ್ ಸೊರಕೆ (ನಗರಾಭಿವೃದ್ಧಿ ಸಚಿವರು)

ಅ) ರಾಜ್ಯದ ನಗರಸ್ಥಳೀಯ ಸಂಸ್ಥೆಗಳಲ್ಲಿ ಕೇಂದ್ರ ಸರ್ಕಾರವು ಜಾರಿಗೆ ತಂದಿರುವ ಪೌರಘನತ್ಯಾಜ್ಯ ವಸ್ತು (ವ್ಯವಸ್ತಾಪನೆ ಮತ್ತು ನಿರ್ವಹಣೆ) ನಿಯಮಗಳು 2000 ರೀತ್ಯಾ ತ್ಯಾಜ್ಯ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗಿರುತ್ತದೆ.

ಆ) ಮೇಲೆ ತಿಳಿಸಿರುವಂತೆ, ರಾಜ್ಯದ ನಗರಸ್ಥಳೀಯ ಸಂಸ್ಥೆಗಳಲ್ಲಿ ಪೌರಘನತ್ಯಾಜ್ಯ ವಸ್ತು (ವ್ಯವಸ್ತಾಪನೆ ಮತ್ತು ನಿರ್ವಹಣೆ) ನಿಯಮಗಳು 200 ರ ರೀತ್ಯ ನಗರ ಪ್ರದೇಶದಲ್ಲಿ ಉತ್ಪತ್ತಿಯಾಗುವ ಪೌರಘನತ್ಯಾಜ್ಯ ವಸ್ತುಗಳ ವಿಂಗಡಣೆ, ಸಂಗ್ರಹಣೆ, ಸಾಗಾಣಿಕೆ, ಸಂಸ್ಕರಣೆ ಹಾಗು ವಿಲೇವಾರಿಗಳನ್ನು ನಿಯಮಬದ್ದವಾಗಿ ಕೈಗೊಳ್ಳಲು ಎಲ್ಲಾ ನಗರಸ್ಥಳೀಯ ಸಂಸ್ಥೆಗಳಿಗೆ ಸೂಚನೆಗಳನ್ನು ನೀಡಲಾಗಿದ್ದು, ಸ್ಥಳೀಯ ಸಂಸ್ಥೆವಾರು ತ್ಯಾಜ್ಯ ವಿಲೇವಾರಿ ವಿವರಗಳನ್ನು ಅನುಬಂಧ–1 ರಲ್ಲಿ

ನೀಡಲಾಗಿದೆ. ಹಾಗೂ ಬಿ.ಬಿ.ಎಂ.ಪಿಗೆ ಸಂಬಂಧಿಸಿದ ಮಾಹಿತಿಯನ್ನು ಅನುಬಂಧ 2 ರಲ್ಲಿ ನೀಡಲಾಗಿದೆ.

ಇ) ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ, ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಸಚಿವಾಲಯವು ಜಾರಿಗೆ ತಂದಿರುವ ಪೌರ ಘನತ್ಯಾಜ್ಯ ವಸ್ತು (ವ್ಯವಸ್ಥಾಪನೆ ಮತ್ತು ನಿರ್ವಹಣೆ) ನಿಯಮಗಳು, 2000ರ ರೀತ್ಯಾ ಮೂಲದಲ್ಲಿದೆಯೇ ತ್ಯಾಜ್ಯ ವಸ್ತುಗಳ ವಿಂಗಡಣೆ, ಮನೆ–ಮನೆಗಳಿಂದ ಹಾಗು ವಿವಿಧ ತ್ಯಾಜ್ಯ ಉತ್ಪಾದಕರಿಂದ ನೇರವಾಗಿ ತ್ಯಾಜ್ಯ ಸಂಗ್ರಹಣೆ, ಒಣ ತ್ಯಾಜ್ಯ ವಸ್ತುಗಳ ನಿರ್ವಹಣೆಗಾಗಿ ವಾರ್ಡುಗಳ ಮಟ್ಟದಲ್ಲಿಯೇ ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳ ಸ್ಥಾಪನೆ, ಕಟ್ಟಡ ಕಸ, ಕೋಳಿ ಮತ್ತು ಮಾಂಸ ಅಂಗಡಿಗಳ ತ್ಯಾಜ್ಯ, ಮಾರುಕಟ್ಟೆ ಹಾಗು ಕಲ್ಯಾಣ ಮಂಡಪಗಳಿಂದ ಉತ್ಪಾದನೆಯಾಗುವ ತ್ಯಾಜ್ಯ ಮುಂತಾದ ತ್ಯಾಜ್ಯ ವಸ್ತುಗಳ ಪ್ರತ್ಯೇಕ ಸಂಗ್ರಹಣೆ ಹಾಗು ಸಾಗಾಣಿಕೆ, **ಹಸಿಕಸವನ್ನು ವಿಂಡ್‌ರೋ ವಿಧಾನ/ ಎರೆಹುಳು ಗೊಬ್ಬರ / ಬಯೋ–ಮೆಥನೇಷನ್** ವಿಧಾನ ಅನುಸರಿಸಿ ಸಂಸ್ಕರಣೆ ಮಾಡುವುದು ಹಾಗು ಅಂತಿಮವಾಗಿ ಉಳಿಯುವ ಕೇವಲ ನಿಸ್ಸತ್ವ ಹಾಗು ನಿರುಪಯುಕ್ತ ತ್ಯಾಜ್ಯ ವಸ್ತುಗಳನ್ನು ಪರಿಸರಕ್ಕೆ ಧಕ್ಕೆಯಾಗದಂತೆ ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡು ನೆಲಭರ್ತಿ ಮಾಡುವುದು ಮುಂತಾದ ಕ್ರಮಗಳನ್ನು ತೆಗೆದುಕೊಳ್ಳುವಂತೆ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ಸೂಚಿಸಲಾಗಿರುತ್ತದೆ.